ಅಳುಕಿನಿಂದ, ಮುಜುಗರದಿಂದ ಕುಲುಕಿದ. 'ಹೇ ಅಖಿಲ್, ಯಾಕೋ ಸಪ್ಪಗಿದ್ದೀಯ? ಇವತ್ತು ಎಂಥ ವಿಶೇಷ ದಿನ ಗೊತ್ತಲ್ವಾ?' ಎಂದು ಮುನ್ನಿ ಸಂತೋಷಪಡಿಸಲು ಪ್ರಯತ್ನಿಸಿದಳು. ಅಖಿಲ್, 'ಗೊತ್ತುಬಿಡೇ, ಇವತ್ತು ನಿಮ್ಮ ದೊಡ್ಡ ಹಬ್ಬ ಅಲ್ವಾ?' ಬೇಸರದಿಂದ ಉತ್ತರಿಸುತ್ತಲೇ, 'ನೋಡಿಲ್ಲಿ, ನೀನ್ ತಂದಿರೋ ಮೂಳೆ ತಿನ್ನಕ್ಕೆ ಕೆಲವರು ಹೆಂಗೆ ಕಾಯ್ತಾ ಇದ್ದಾರೆ. ಕೊಟ್ಟು ಸಮಾಧಾನಪಡಿಸು' ಎಂದ.

'ಹೇ ಅಖಿಲ್, ಅದೆಲ್ಲ ಮಾಮೂಲಿ. ಇಂದು ನಿನ್ನ ಹುಟ್ಟಿದ ದಿನ, ಖುಷಿಯಾಗಿರಬೇಕು.'

ಅಖಿಲ್, 'ಅದೆಲ್ಲ ಮುಗಿದುಹೋದ ಕಥೆ. ನನ್ನ ಹುಟ್ಟಹಬ್ಬ ಚೆನ್ನಾಗಾಗೋದು ಕೆಲವರಿಗೆ ಇಷ್ಟ ಇದ್ದಿಲ್ಲ ಅಂತ ಕಾಣುತ್ತೆ' ಎಂದು ನಡೆದಿದ್ದೆಲ್ಲಾ ಹೇಳಿದ. ಮುನ್ನಿ, 'ಅಷ್ಟೇನಾ?' ಎಂದು ಅವನನ್ನು ಸಮಾಧಾನಪಡಿಸುತ್ತಾ, 'ಅದಕ್ಯಾಕೆ ಚಿಂತೆ, ನಾನಿಲ್ಲಿ ಏನ್ ತಂದಿದ್ದೀನಿ ನೋಡು' ಎಂದು ಅವಳು ತನ್ನ ಮೂರು ಡಬ್ಬಿಯ ಬಟ್ಟಲಲ್ಲಿ ಮೊದಲನೆಯ ಬಟ್ಟಲಿನ ಮುಚ್ಚಳ ತೋರಿಸಲು ಮುಂದಾದಳು. ಅಖಿಲ್ ಅದನ್ನು ಕೇಳಿದೊಡನೆ ನಾಲ್ಕು ಹೆಜ್ಜೆ ದೂರ ಸರಿದ. ಮುನ್ನಿ ತನ್ನ ಮುಚ್ಚಳ ತೆರೆದಳು. ಎಲ್ಲರೂ ವಾವ್, ಸೂಪರ್, ನೈಸ್ ಎಂದು ಹೊಗಳಿದ್ರು.

ಅಖಿಲ್ ವ್ಯಂಗ್ಯವಾಗಿ, 'ನೈಸ್, ಸೂಪರ್, ತಿನ್ನಿ ತಿನ್ನಿ... ನಿಮಗೆಲ್ಲ ಪ್ರತೀ ದಿನ ಮೂಳೆಯದ್ದೇ ಚಿಂತೆ ಅಲ್ವಾ' ಎಂದು ಎಲ್ಲರ ಮೇಲೆ ಸಿಟ್ಟು ಮಾಡಿಕೊಂಡ.

ನಾನು, 'ಹೇ ಅಖಿಲ್, ಬಾ ಇಲ್ಲಿ' ಎಂದರೂ ಬರಲಿಲ್ಲ.

'ಹಾಗೇನಿಲ್ಲ ಬಾರೋ... ಇಲ್ಲಿ ನೋಡು... ಏನಿದೆ ಅಂತ?' ಅವನು ನಿಧಾನವಾಗಿ ಹೆಜ್ಜೆ ಹಾಕಿ ತನ್ನ ಕೈಬಟ್ಟೆಯಿಂದ ಮೂಗು ಮುಚ್ಚಿಕೊಂಡು ಬಗ್ಗಿ ನೋಡಿದ. ಕಣ್ಣುಗಳು ದೊಡ್ಡವಾದವು. ಮೆಲ್ಲಗೆ ಹತ್ತಿರ ಹೋದ. ಮುಖ ಅರಳಿತು. ಮೂಗಿನ ಮೇಲಿದ್ದ ಕೈಬಟ್ಟೆ ತೆಗೆದ. 'ವಾವ್, ಸೂಪರ್, ವೆರಿ ನೈಸ್' ಅಂದ.

ಮುನ್ನಿಯ ಊಟದ ಡಬ್ಬಿ ಎಂದಾಕ್ಷಣ ಸಿಟ್ಟು ಮಾಡಿಕೊಳ್ಳೋ ಅಖಿಲ್ ಇಂದು ಆ ಬಟ್ಟಲು ನೋಡಿ ಹೀಗೆ ಹೊಗಳಲು ಕಾರಣವಿದೆ. ಮುನ್ನಿ ಮನೆಯಲ್ಲಿ ಹಬ್ಬಕ್ಕಾಗಿ ಮಾಡಿದ್ದ ಹಾಲು ಶಾವಿಗೆ ಪಾಯಸವನ್ನು ಕೇಕ್ ರೀತಿಯಲ್ಲಿ ಗಟ್ಟಿಯಾಗಿ ಮಾಡಿ, ಅದರ ಮೇಲೆ ಗೋಡಂಬಿ ದ್ರಾಕ್ಷಿಯಲ್ಲಿ 'ಅಭಿ ಹುಟ್ಟುಹಬ್ಬಕ್ಕೆ ಶುಭಾಶಯ' ಕೋರಿದ್ದಳು. ಅಖಿಲ್ ಸಂತೋಷಕ್ಕೆ ಮೇರೆ ಇಲ್ಲದಂಗಾತು. ಎಲ್ಲದರಲ್ಲೂ ಜೊತೆಗಿರುತ್ತಿದ್ದ ಮುನ್ನಿಯನ್ನು ಈ ಊಟದ ವಿಷಯದಲ್ಲಿ ಸೇರದ ಅಖಿಲ್ ಇಂದು ತುಂಬಾ ಸಂತೋಷದಿಂದ ಅದೇ ಬಾಕ್ಸ್‌ನಲ್ಲಿನ ಹಾಲು ಶಾವಿಗೆ ಕೇಕ್ ಮೂಲಕ ತನ್ನ ಹುಟ್ಟುಹಬ್ಬ ಆಚರಿಸಿಕೊಂಡ.

ಪ್ರತಿ ವರ್ಷಕ್ಕಿಂತ ಈವಾಗಿಂದು ಅವನಿಗೆ ಬಾಳಾ ಖುಷಿ ಕೊಡ್ತು. ಎಲ್ಲರ ಕೈಯಿಂದ ಶಾವಿಗೆ ಕೇಕ್ ತಿಂದು ಅಖಿಲ್ ಖುಷಿಯಲ್ಲಿ ಇರುವಾಗಲೇ, ಮುನ್ನಿ ತನ್ನ ಡಬ್ಬದ ಇನ್ನೊಂದು ಮುಚ್ಚಳ ತೆಗೆದಳು. ಅಭಿ ಬಾಯಿ ತೆಗೆದ. ಮುನ್ನಿ ಅಖಿಲ್‌ನನ್ನು ನೋಡಿ ತಟ್ಟನೆ ಮುಚ್ಚಳ ಮುಚ್ಚಿದಳು. ಅಖಿಲ್ ಅದನ್ನು ನೋಡಿದರೂ ನಗುತ್ತಾ, ಇನ್ನೊಂದು ತುತ್ತು ಶಾವಿಗೆ ಕೇಕ್ ಬಾಯಿಗೆ ಹಾಕ್ಕೊಂಡು ಮುನ್ನಿಯ ಪಕ್ಕದಲ್ಲಿ ಹೋಗಿ ಕುಳಿತ.

ಜೋರಾದ ಗಾಳಿ ಬಂದಂತಾಯಿತು. ದೈವದ ಕಟ್ಟೆಯ ಮರದ ಮೇಲಿಂದ ಬೇವು, ಅರಳಿ ಎಲೆಗಳು ಉದುರಿದವು. ಎಲ್ಲರೂ ಖುಷಿಯಾಗಿ ಕೈ ಕೈ ಹಿಡಕೊಂಡು ಮನೆ ಕಡೆ ಹೊರಟರು.

●

